International Journal of Applied Research 2022; 8(2): 546-548




**ISSN Print:** 2394-7500
**ISSN Online:** 2394-5869
**Impact Factor:** 8.4
IJAR 2022; 8(2): 546-548
www.allresearchjournal.com
Received: 02-12-2021
Accepted: 06-01-2022

**Dr. Narayana KH**
Sanskrit Lecturer,
Seshadripuram Composite
PU College, Seshadripuram,
Bangalore, Karnataka, India

**Corresponding Author:**
**Dr. Narayana KH**
Sanskrit Lecturer,
Seshadripuram Composite,
PU College, Seshadripuram,
Bangalore, Karnataka, India

# वेंदे कृषिः

**Dr. Narayana KH**

## ಪರಿಚಯ

ವೇದವು ಸರ್ವರಿಗೂ ಜ್ಞಾನವನ್ನು ಒದಗಿಸಿಕೊಡುವ ಜ್ಞಾನಭಂಡಾರವಾಗಿದೆ. ಇಂತಹ ವಾದವು ಅನೇಕಾನೇಕ ವಿಷಯಗಳನ್ನು ಜನತೆಗೆ ಮನದಟ್ಟು ಮಾಡಿಕೊಡುತ್ತದೆ. 'वेदविदो वदन्ति' ಎಂಬ ಮಾತು ಶಾಶ್ವತವಾದದ್ದು. ಇಂತಹ ವೈದಿಕ ವಿಷಯಗಳಲ್ಲಿ ಕೃಷಿಯೂ ಒಂದು. ನಮಗೆ ತಿಳಿದಿರುವಂತೆ ವೇದಗಳು ನಾಲ್ಕು. ऋग्वेद, यजुर्वेद, सामवेद, अथर्वणवेद ಎಂಬುದಾಗಿ ಎಲ್ಲ ವೇದಗಳೂ ಈ ಕೃಷಿಯ ಕುರಿತಾಗಿ ಹೇಳುತ್ತದೆಯೇ ಎಂಬ ಪ್ರಶ್ನೆ ಬಂದಾಗ ಸಾಮಾನ್ಯವಾಗಿ ನಾನು ತಿಳಿದಿರುವಂತೆ ಸಾಮವೇದವನ್ನು ಹೊರತುಪಡಿಸಿ ಇನ್ನುಳಿದ ಮೂರು ವೇದಗಳೂ ಹೆಚ್ಚಿನದಾಗಿ ಕೃಷಿ ವಿಚಾರವನ್ನು ತಿಳಿಸುತ್ತದೆ.

ಇವುಗಳಲ್ಲಿ ಅಥರ್ವವೇದವು ಋಗ್ವೇದದ ಒಂದು ಭಾಗವೆಂಬ ವಿದ್ವಾಂಸರ ಅಭಿಪ್ರಾಯವನ್ನು ಇಟ್ಟುಕೊಂಡರೂ ಇವುಗಳಲ್ಲಿ ವಿಭಿನ್ನ ರೀತಿಯ ಕೃಷಿ ವಿಚಾರಗಳನ್ನು ತಿಳಿದುಕೊಳ್ಳಬಹುದು. ಮತ್ತು ಯಜುರ್ವೇದರೀತ್ಯಾ ನಮಗೆ ಮನದಟ್ಟಾಗುವುದೆಂದರೆ ಈ ವೇದವು ಯಜ್ಞಾದಿಗಳ ಕುರಿತು ತಿಳಿಸಿದರೂ ಕೂಡ ಯಜ್ಞಯಾಗಾದಿಗಳಿಗೆ ಕೊಡುವ ಆಹುತಿಯನ್ನು ನಾವು ಗಮನಿಸಿದಾಗ ಅಲ್ಲಿ ಯಾವ ಯಾವ ರೀತಿಯ ದ್ರವ್ಯವನ್ನು ಆಹುತಿಯನ್ನಾಗಿ ನೀಡುತ್ತಾರೆ ಎಂಬುದನ್ನು ತಿಳಿದುಕೊಳ್ಳುವುದರ ಮೂಲಕ ಅಲ್ಲಿಯೂ ಕೃಷಿ ಸಂಬಂಧಿ ದ್ರವ್ಯಗಳನ್ನು ಕುರಿತು ಅರಿಯಬಹುದಾಗಿದೆ. ಅತಿ ಹೆಚ್ಚಾಗಿ ತಿಳಿಸಲ್ಪಟ್ಟ ವಿಷಯಗಳನ್ನು ಸಂಕ್ಷಿಪ್ತವಾಗಿ ತಿಳಿಯುವ ಮೊದಲು ವೈದಿಕರೀತ್ಯಾ ಕೃಷಿ ಎಂದರೇನು? ಎಂಬುದನ್ನು ತಿಳಿಯ ಹೊರಟರೆ...

`ಕೃಷಿ' ಎಂಬ ಶಬ್ದವು 'कृष' ಎಂಬ ಧಾತುವಿನಿಂದ ಉತ್ಪನ್ನವಾಗಿ ಒಕ್ಕಲುತನ ಎಂಬ ಅರ್ಥವನ್ನು ನೀಡುತ್ತದೆ. ಬೇಸಾಯ ಮತ್ತು ಸಾಗುವಳಿ ಮಾಡುವವನನ್ನು ಕೃಷಿಕ ಎಂದು ಕರೆಯುತ್ತಾರೆ, ಋಗ್ವೇದವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಇದನ್ನು ಮುಖ್ಯವಾಗಿ ಧಾರ್ಮಿಕ ಸೂಕ್ತಗಳು ಮತ್ತು ಲೌಕಿಕ ಸೂಕ್ತಗಳು ಎಂದು ಎರಡು ಭಾಗಗಳನ್ನಾಗಿಸಿದ್ದಾರೆ. ಧಾರ್ಮಿಕ ಸೂಕ್ತಗಳಲ್ಲಿ ಮುಖ್ಯವಾಗಿ ದೇವತಾ ಸ್ತುತಿಗಳನ್ನು ಮಾತ್ರ ಕಾಣುತ್ತೇವೆ. ಆದರೆ ಲೌಕಿಕ ಸೂಕ್ತಗಳಲ್ಲಿ ಅನೇಕ ಲೌಕಿಕ ವಿಚಾರಗಳೊಂದಿಗೆ ಅಂದಿನ ಸಾಮಾಜಿಕ ಜೀವನದ ಪರಿಚಯವಾಗುತ್ತದೆ.

ಋಗ್ವೇದದ ೧೦ ನೇ ಮಂಡಲದಲ್ಲಿ ಬರುವ 'कृषन् इत् फालः अशितरकृणोति यन् अद्यानं अपव्यक्के चरित्रे' ಎಂಬ ಈ ಮಂತ್ರದ ಮುಖಾಂತರ `ನೇಗಿಲು ಕೃಷಿ ಮಾಡಿ ತನ್ನ ಯಜಮಾನನು ಊಟ ಮಾಡುವಂತೆ ಮಾಡುವುದು' ಎಂಬ ವಿಚಾರವನ್ನು ತಿಳಿಸುತ್ತದೆ. ಮತ್ತು ಇದೇ ಮಂಡಲದ ೧೧೭ ನೇ ಸೂಕ್ತದಲ್ಲಿ ದಾನದ ಮಹತ್ವವನ್ನು ಕುರಿತಾಗಿ ಹೇಳುತ್ತಾ 'अन्नदानं परंदानं'' ಎಂಬ ವಿಷಯವನ್ನು ತಿಳಿಸಿದ್ದಾರೆ.

ಇಷ್ಟೇ ಅಲ್ಲದೆ 'ಅಕ್ಷಸೂಕ್ತ' ದಲ್ಲಿ 'अक्षैर्मादी कृषमित् कृषष्ट वित्ते रमस्य बहुमन्यमानः' ಅಂದರೆ ಅಕ್ಷಗಳಿಂದ ಜೂಜಾಡಬೇಡ, ಕೃಷಿಯನ್ನೇ ಮಾಡು, ಕೃಷಿಯಿಂದ ಸಂಪಾದಿಸಿದ ಧನವನ್ನೇ ಅಧಿಕವೆಂದು ತಿಳಿದು ಸಂತೋಷಪಡು ಎಂದು ಎಚ್ಚರಿಸುತ್ತಿದೆ. ಹೀಗೆ ಇನ್ನೂ ಅನೇಕ ವಿಚಾರಗಳನ್ನು ಋಗ್ವೇದವು . ತಿಳಿಸಿಕೊಡುತ್ತದೆ.

ಅಥರ್ವಣವೇದವನ್ನವಲೋಕಿಸಿದಾಗ ಈ ವೇದದಲ್ಲಿ ಪ್ರತಿಪಾದಿಸಲ್ಪಟ್ಟ ವಿಚಾರ ಇತರ ವೇದಗಳ ವಿಚಾರಕ್ಕಿಂತ ವಿಲಕ್ಷಣವಾಗಿದೆ. ಈ ವೇದದಲ್ಲಿ ಬರುವ ಕೃಷಿ ವಿಚಾರವನ್ನು ತಿಳಿಯುವ ಮೊದಲು ವೇದದ ಕುರಿತಾಗಿ ಸ್ವಲ್ಪದರಲ್ಲಿ ತಿಳಿದುಕೊಳ್ಳುವುದು ಅತ್ಯವಶ್ಯಕವಾಗಿದೆ. ಋಗ್ಯಜುಸ್ಸಾಮಗಳ ಕುರಿತು ಇಲ್ಲದ ಹಲವು ಜಂಜಾಟಿತ ಪ್ರಶ್ನೆಗಳು ಅಥರ್ವ ವೇದದ ಕುರಿತಿದೆ. ಅಥರ್ವವೇದ ರಾಕ್ಷಸ ವೇದ, ಮಾಯಾ, ಮಾಟ ತಂತ್ರ ಮೊದಲಾದ ರಾಕ್ಷಸೀ ಕ್ರಿಯೆಗಳೇ ಅಥರ್ವವೇದದಲ್ಲಿ ಬರುವ ವಿಚಾರಗಳು ಎಂಬ ತಪ್ಪು ಪರಿಕಲ್ಪನೆ ಸಾಧಾರಣವಾಗಿ ಎಲ್ಲೆಡೆಯೂ ಕಂಡು ಬರುತ್ತದೆ. ಅಥರ್ವಣ ಎಂದರೆ ಏನೆಂಬುದನ್ನು ನಿರುಕ್ತಕಾರರು ಹೀಗೆ ವಿಶ್ಲೇಷಿಸಿದ್ದಾರೆ. 'अथर्वणो अथर्वणवंत, सर्वशिक्करति कर्मा, तत्प्रतिषेधः' (೧೧-೩-೧೭) ಅಥರ್ವ ಮಂತ್ರಗಳೆಂದರೆ - ಅಥರ್ವಣವಂತ ಮಂತ್ರಗಳು, ಥರ್ವಣವೆಂದರೆ ಸಂಚರಿಸುವಂಥದ್ದು. ಅದರ ಪ್ರತಿಷೇಧ ಅಥರ್ವ. ಇದನ್ನು ನಾವು ಅರ್ಥೈಸಿದಾಗ ಯಾವ ಮಂತ್ರದಿಂದ ಚಂಚಲತೆ ದೂರವಾಗಿ ನಿಶ್ಚಲತೆ ಲಭಿಸುವುದೊ ಅವೇ ಅಥರ್ವ ಮಂತ್ರಗಳು, ಈ ವಿಷಯವನ್ನು ಮನದಲ್ಲಿಟ್ಟುಕೊಂಡು ಈ ವೇದದ ಬಗೆಗಿರುವ ಅಜ್ಞಾನಾಂಧಕಾರವನ್ನು ದೂರೀಕರಿಸಿ ಅದರಲ್ಲಿ ಬರುವ ಕೃಷಿಯ ಕುರಿತು ತಿಳಿಯ ಹೊರಟಾಗ ಈ ವೇದದಲ್ಲಿ ಮೊಟ್ಟಮೊದಲು ಸನಾತನವಾದ ಪ್ರಕೃತಿ ಮಾತೆಯ ಕುರಿತಾಗಿ ತಿಳಿಸುತ್ತ ವಾಸ್ತವ ಜಗತ್ತಿನ ಜೀವನ ವಿಧಾನದ ನಿರೂಪಣೆಯನ್ನು ಮಾಡಿದ್ದಾರೆ, ವ್ಯಕ್ತಿತ್ವದ ಪರಿಚಯವನ್ನು ಮಾಡಿಕೊಡುತ್ತ 'ब्राह्मणश्च राजाच धेनुश्चाढ्वांश्च हिश्च यवश्च मधुसप्तमम्' ಎಂಬೀ ಮಂತ್ರದಲ್ಲಿ ಬ್ರಾಹ್ಮಣ, ರಾಜ, ಧೇನು, ಎತ್ತು, ಧಾನ್ಯ, ಜವೆಗೋಧಿ, ಹಾಗೂ ಮಧುವಿನ ಮಧುರವಾದ ಸಂಪರ್ಕವನ್ನು ಯಾವಾತನು ಅರಿತುಕೊಳ್ಳುತ್ತಾನೋ ಅವನು ಮಧುರವಾದ-ವ್ಯಕ್ತಿತ್ವ ವುಳ್ಳವನಾಗುತ್ತಾನೆ ಎಂದು ಹೇಳಿದ್ದಾರೆ. ಇಷ್ಟೇ ಅಲ್ಲದೆ ಈ ವೇದದ ೮ ನೇ ಕಾಂಡದ ೧೦ ನೇ ಸೂಕ್ತದಲ್ಲಿ ಮಾಯಾಶಕ್ತಿಯ ಕುರಿತಾಗಿ ಹೇಳುತ್ತ ಆದಿಯಲ್ಲಿ ವಿರಾಟ್ ಎಂಬ ಶಕ್ತಿ ಪುಟಿದೆದ್ದು ನಿಂತಿತು. ಅದನ್ನು ಮನುಷ್ಯನು 'ಬಾ ಅನ್ನದಾತೆಯೇ' ಎಂದು ಪ್ರಾರ್ಥಿಸಿದನು, ಅದನ್ನು ಜ್ಞಾನಿಯ ಮಗನಾದ ಪೃಥಿಯು (ಕೃಷಿಕ) ದೋಹನ ಮಾಡಿದನು. ಆ ದೋಹನದಿಂದ ಕೃಷಿ ಮತ್ತು ಸಸ್ಯಗಳು ಉತ್ಪನ್ನವಾದುವು. ಆದ್ದರಿಂದ ಮನುಷ್ಯರು ಕೃಷಿಯನ್ನು ಹಾಗೂ ಸಸ್ಯಾದಿಗಳನ್ನು ಅವಲಂಬಿಸಿ ಜೀವಿಸುತ್ತಾರೆ ಎಂಬ ಈ ಅಂಶವನ್ನು ಯಾವನು ಬಲ್ಲನೋ ಅವನು ಉತ್ತಮ ಕೃಷಿಕನಾಗಿ ತನ್ನ ಜೀವನ ಮಾಡಲು ಸಮರ್ಥನಾಗುತ್ತಾನೆ ಎಂಬ ಅಂಶವು 'ॐ पृथी वैनोऽदोक्कां कृषिंच सस्यंचाधोक्' ಮತ್ತು 'ते कृषिंच सस्यं च मनुष्कानि उपजीवन्ति कृष्टरादिरुपटोवनीयो भवति य एवं - वेद' ಈ ಮೊದಲಾದ ಮಂತ್ರಗಳಿಂದ ತಿಳಿದು ಬರುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ ಯಾವುದೇ ಜೀವಿ ಕೃಷಿ ಮಾಡಬೇಕೆಂದರೆ ಭೂಮಾತೆಯ ಅನುಗ್ರಹ ಅತ್ಯವಶ್ಯ. ಯಾಕೆಂದರೆ ಭೂಮಾತೆ ಸಾಮಾನ್ಯಳಾದವಳಲ್ಲ. 'जननी जन्मभूमिश्च स्वर्गादपि गरीयसि' ಎಂಬಂತೆ ಸ್ವರ್ಗಕ್ಕೂ ಮಿಗಿಲಾದವಳು. ಅಂತಹ ಭೂಮಾತೆಯು ತಾಯಿಯಂತೆ ನಮ್ಮನ್ನೆಲ್ಲ ತನ್ನ ಮಡಿಲಿನಲ್ಲಿಟ್ಟುಕೊಂಡು ಅನೇಕ ರತ್ನ ಸಂಪನ್ನಳಾಗಿದ್ದಾಳೆ. ಆ ರತ್ನಗಳೇ ನಾವು ದಿನನಿತ್ಯ ಉಪಯೋಗಿಸುವ ದವಸ ಧಾನ್ಯಗಳು ಮತ್ತು ಖನಿಜ ಪದಾರ್ಥಗಳಾಗಿವೆ. ಆದ್ದರಿಂದ 'ಕೈ ಕೆಸರಾದರೆ ಬಾಯಿ ಮೊಸರು' ಎಂಬ ಗಾದೆಯಂತೆ ಪರಿಶ್ರಮಪಟ್ಟು ಕರ್ಮದ ಫಲವನ್ನು ಸಂಪಾದಿಸಬೇಕು. ವೇದ ವಾಙ್ಮಯದಲ್ಲಿ ಕೃಷಿ ವಿಚಾರವನ್ನು ಅರಿತುಕೊಳ್ಳುವುದೇನೂ ಕಷ್ಟಸಾಧ್ಯವಾಗದು. ಆದರೆ ಈ ಕೃಷಿ ವಿಚಾರವನ್ನು ಆಧುನಿಕ ಯುಗದಲ್ಲಿ ಅನುಸರಿಸಿಕೊಂಡು ಹೋಗುವುದು ತುಂಬಾ ಕಷ್ಟಮಯವಾಗಿದೆ. ಎಷ್ಟೋ ಜನರಿಗೆ ಉದರವನ್ನು ಭರಿಸಬೇಕಾದ ನಾಡು ಇಂದು ಉದರದೊಡನೆ ತನ್ನಆದರವನ್ನು ಕಳೆದುಕೊಂಡುತನ್ನ ಮಡಿಲಿನಲ್ಲಿಟ್ಟುಕೊಂಡು ಅನೇಕ ರತ್ನ ಸಂಪನ್ನಳಾಗಿದ್ದಾಳೆ. ಆ ರತ್ನಗಳೇ ನಾವು ದಿನನಿತ್ಯ ಉಪಯೋಗಿಸುವ ದವಸ ಧಾನ್ಯಗಳು ಮತ್ತು ಖನಿಜ ಪದಾರ್ಥಗಳಾಗಿವೆ. ಆದ್ದರಿಂದ 'ಕೈ ಕೆಸರಾದರೆ ಬಾಯಿ ಮೊಸರು' ಎಂಬ ಗಾದೆಯಂತೆ ಪರಿಶ್ರಮಪಟ್ಟು ಕರ್ಮದ ಫಲವನ್ನು ಸಂಪಾದಿಸಬೇಕು. ವೇದ ವಾಹ್ಮಯದಲ್ಲಿ ಕೃಷಿ ವಿಚಾರವನ್ನು ಅರಿತು ಕೊಳ್ಳುವುದೇನೂ ಕಷ್ಟಸಾಧ್ಯವಾಗದು. ಆದರೆ ಈ ಕೃಷಿ ವಿಚಾರವನ್ನು ಆಧುನಿಕ ಯುಗದಲ್ಲಿ

ಅನುಸರಿಸಿಕೊಂಡು ಹೋಗುವುದು ತುಂಬಾ ಕಷ್ಟಮಯವಾಗಿದೆ. ಎಷ್ಟೋ ಜನರಿಗೆ ಉದರವನ್ನು ಭರಿಸಬೇಕಾದ ನಾಡು ಇಂದು ಉದರದೊಡನೆ ತನ್ನ ಆದರವನ್ನು ಕಳೆದುಕೊಂಡು ಭೂಮಿಯ ಫಲವತ್ತತೆಯನ್ನು ಕಳೆದುಕೊಳ್ಳುತ್ತಿದೆ. ಆದ್ದರಿಂದ ಸರ್ವ ಜನರೂ ಸಹ ಈ ಕುರಿತಾಗಿ ಚಿಂತಿಸಿ ಭೂಮಿಯ ಫಲವತ್ತತೆಯನ್ನು ಅಭಿವೃದ್ಧಿಗೊಳಿಸುತ್ತ ಕರ್ಮ ಸಫಲತೆಯನ್ನು ಅನುಭವಿಸಿ ಕರ್ಮದ ಫಲವನ್ನು ಉಣ್ಣಬೇಕಾದದ್ದು ಅತ್ಯವಶ್ಯಕ. ಅದಕ್ಕಾಗಿ ವೇದಕಾಲ ಮತ್ತು ನವೀನಕಾಲದ ದೃಷ್ಟಿಕೋನವನ್ನು ಮನದಲ್ಲಿಟ್ಟುಕೊಂಡು ಚೆನ್ನಾಗಿ ವೇದವನ್ನು ಅಭ್ಯಸಿಸಿ ನವೀನ ಯುಗಕ್ಕೂ ವೇದದ ಅಂಶಗಳನ್ನು ತೆಗೆದುಕೊಂಡು ಕೃಷಿ ಸಮಾಜವನ್ನು ವಿಸ್ತರಿಸಬೇಕಾದದ್ದು ಅನಿವಾರ್ಯ.

**ಆಕರ ಗ್ರಂಥಗಳು :**


1. ಋಗ್ವೇದ ಭಾಷ್ಯ : ಪಂ. ಸುಧಾಕರ ಚತುರ್ವೇದಿ (ಭಾಷ್ಯ : ಶೇಷ ನವರತ್ನ)
2. ಯಜುರ್ವೇದ ಭಾಷ್ಯ : ಪಂ. ಸುಧಾಕರ ಚತುರ್ವೇದಿ (ಭಾಷ್ಯ : ಶೇಷ ನವರತ್ನ)
3. ಅಥರ್ವವೇದ ಭಾಷ್ಯ : ಪಂ. ಸುಧಾಕರ ಚತುರ್ವೇದಿ (ಭಾಷ್ಯ : ಶೇಷ ನವರತ್ನ)
4. ಅಥರ್ವವೇದ ಸಂಹಿತಾ : ಪಾಂಡುರಂಗ ಪಂಡಿತ
5. ಸುಭಾಷಿತ ಮಂಜರೀ : ಕನ್ನಡ ಸಾಹಿತ್ಯ ಪರಿಷತ್ತು